– –

**ಅಸಲು ದಾವಾ ನಂಃ87/2013**
**ಪಿ.ಡಬ್ಲ್ಯೂ:01**

**ದಿನಾಂಕಃ 23-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ ಜೆ ಆರ್., 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಂಶವೃಕ್ಷವನ್ನು ತೋರಿಸಿದ್ದು, ಸದರಿ ವಂಶವೃಕ್ಷದಲ್ಲಿ ಚೆಲಿಮಪ್ಪನ ಮಗ ಗುರುಪಾದಯ್ಯರವರಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಸರಿ. ಸದರಿ ಗುರುಪಾದಯ್ಯರವರ ಹೆಂಡತಿ ಮತ್ತು ಇತರೆ ಮಕ್ಕಳ ಹೆಸರನ್ನು ತೋರಿಸಿಲ್ಲ ಎಂದರೆ ಸರಿ. ಸದರಿ ಗುರುಪಾದಯ್ಯರವರ ತಮ್ಮನಾದ ಜಿ.ತಿಪ್ಪೇಸ್ವಾಮಿಯವರು ಪ್ರಸ್ತುತ ಮೃತರಾಗಿದ್ದು ಸದರಿಯವರಿಗೆ ಹೆಂಡತಿ ಮಕ್ಕಳಿದ್ದು, ಅವರನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸರಿ. ಸದರಿ ಗುರುಪಾದಯ್ಯರವರ ತಮ್ಮನಾದ ಸೋಮಣ್ಣರವರಿಗೆ ಹೆಂಡತಿ ಮಕ್ಕಳಿದ್ದು, ಎಲ್ಲಾ ಮಕ್ಕಳನ್ನು ಮತ್ತು ಹೆಂಡತಿಯನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದರೆ ಸರಿ.

2. ನನ್ನ ತಾಯಿ ಈಶ್ವರಮ್ಮರವರ ಮರಣ ದಿನಾಂಕವನ್ನು ತೋರಿಸಲು ನ್ಯಾಯಾಲಯಕ್ಕೆ ಸದರಿಯವರ ಮರಣ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ತಾಯಿಯವರಿಗೆ ಆಸ್ತಿಯಲ್ಲಿ ಯಾವುದೇ ಪಾಲನ್ನು ನೀಡದೆ 1 ನೇ ಪ್ರತಿವಾದಿ ಮೋಸದಿಂದ ದಿಃ18-06-1981 ರ ಪಾಲುವಿಭಾಗ ಪತ್ರವನ್ನು ಮಾಡಿಕೊಂಡಿದ್ದು, ಸದರಿ ಪಾಲುವಿಭಾಗ ಪತ್ರವನ್ನು ಮೋಸದಿಂದ ಮಾಡಿಕೊಳ್ಳಲಾಗಿದೆ ಎಂದು ಘೋಷಣೆಯ ಪರಿಹಾರವನ್ನು ಈ ದಾವೆಯಲ್ಲಿ ಕೇಳಿರುತ್ತೇನೆ. ನನ್ನ ತಾಯಿ ಈಶ್ವರಮ್ಮ 2008 ರಲ್ಲಿ ಮೃತರಾಗಿರುತ್ತಾರೆ. ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಈಶ್ವರಮ್ಮರವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು 3 ನೇ ಪ್ರತಿವಾದಿಯು ಕೊಂಡುಕೊಂಡಿದ್ದು, ಸದರಿ 3 ನೇ ಪ್ರತಿವಾದಿ ಮುಂದುವರೆದು ದಾವಾ ಐಟಂ ನಂ.2 ರ ಆಸ್ತಿಯನ್ನು ಮಲ್ಲಿಕಾರ್ಜುನ ಎಂಬುವರಿಗೆ ಮಾರಾಟ ಮಾಡಿರುತ್ತಾರೆ. ಆದರೆ ಯಾವ ಇಸವಿಯಂದು ಮಾರಾಟ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಮಲ್ಲಿಕಾರ್ಜುನ ಜಾಜೂರು ಗ್ರಾಮದವರು. ದಾವಾ ಐಟಂ ನಂ.2 ರ ಆಸ್ತಿಯು ಪ್ರಸ್ತುತ ಸದರಿ ಮಲ್ಲಿಕಾರ್ಜುನರವರ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇರದೆ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.